ಸೆಲೆಬ್ರಿಟಿ

■ ಹನಿ

## ಸೋನಿಯಾ ಕಾಂಗ್ರೆಸ್

ಮನೆಯೊಡತಿ ಮನೆಯಲ್ಲಿ ಇಲ್ಲದೇ ಹೋದರೆ ಏನೆಲ್ಲಾ ಅನಾಹುತಗಳು, ಗೊಂದಲಗಳು ಆಗುತ್ತವೆಯೋ ಅವೆಲ್ಲವೂ ಈಗ ಕಾಂಗ್ರೆಸ್ ನೊಳಗೆ ಆಗುತ್ತಿವೆ. ಒಡತಿ ಸೋನಿಯಾ ಗಾಂಧಿ (64) ದೂರದೇಶದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮಲಗಿದ್ದಾರೆ. ಇಲ್ಲಿ ಅಣ್ಣಾ ಹಜಾರೆಯವರ ಭ್ರಷ್ಟಾಚಾರ ವಿರೋಧಿ ಹೋರಾಟ ಎದುರಿಸಲು ಕಾರ್ಯತಂತ್ರ ಹೇಗೆ ಹೂಡಬೇಕೆಂಬುದು ಗೊತ್ತಾಗದೆ ಕಾಂಗ್ರೆಸ್ ಅತಿರಥರು ಒದ್ದಾಡುತ್ತಿದ್ದಾರೆ!

ಸೋನಿಯಾ ಗಾಂಧಿ ಕಾಂಗ್ರೆಸ್‌ಗೆ ಎಷ್ಟೊಂದು ಅನಿವಾರ್ಯ ಅನ್ನುವುದು ಮತ್ತೆ ಮತ್ತೆ ಸಾಬೀತಾಗುತ್ತಿದೆ. 'ನೂರು ವರ್ಷಗಳ ಇತಿಹಾಸ ಇರುವ ಪಕ್ಷಕ್ಕೆ ಇದು ನಾಚಿಕೆಗೇಡಿನ ಸಂಗತಿ' ಎಂದು ವಾದಿಸುವವರೂ ಇದ್ದಾರೆ. ಆದರೆ ಪಕ್ಷದ ಮೇಲೆ ಸೋನಿಯಾ ಹಿಡಿತ ಎಷ್ಟು ಬಲವಾಗಿದೆ ಎನ್ನುವುದಕ್ಕೂ ಇದು ಸಾಕ್ಷಿ. ಬೇರೆ ಪಕ್ಷಗಳಲ್ಲಿ ನಾಯಕರ ಮಧ್ಯೆ ಪದೇ ಪದೇ ಕೋಳಿಜಗಳ ಸಂಭವಿಸುವುದನ್ನು ನೋಡಿದಾಗ, ಸೋನಿಯಾ ಹಿಡಿತದ ಮಹತ್ವ ಅರಿವಾಗುತ್ತದೆ.

ಸೋನಿಯಾ ಉಪಸ್ಥಿತಿಯಲ್ಲಿ ಪ್ರಧಾನಿ ಮನಮೋಹನ್ ಸಿಂಗ್ ಬರೀ ಸರಕಾರ ಕೆಲಸಗಳನ್ನು ನೋಡಿಕೊಂಡು ಹಾಯಾಗಿದ್ದರು. ಪಕ್ಷ ರಾಜಕೀಯ ಮತ್ತು ಪ್ರತಿಪಕ್ಷಗಳ ದಾಳಿಯನ್ನು ಎದುರಿಸುವ ತಂತ್ರಗಾರಿಕೆಯನ್ನು ಸೋನಿಯಾ ಅವರೇ ನಿರ್ವಹಿಸುತ್ತಿದ್ದರು. ಈಗ ಸೋನಿಯಾ ಅನುಪಸ್ಥಿತಿಯಲ್ಲಿ ಕಾಂಗ್ರೆಸ್‌ನ ಹಳೆಯ ತಲೆಗಳು ಮತ್ತು ಹೊಸ ತಲೆಗಳ ನಡುವೆ ಇರುವ ಭಿನ್ನಮತವೂ ಎದ್ದು ಕಾಣುತ್ತಿದೆ.

ಆಗಸ್ಟ್ ಆರಂಭದಲ್ಲಿ ವಿದೇಶಕ್ಕೆ ತೆರಳಿರುವ ಸೋನಿಯಾಗೆ ಉಂಟಾಗಿರುವ ಅನಾರೋಗ್ಯ ಏನು ಎನ್ನುವುದು ಗೊತ್ತಾಗಿಲ್ಲ. ಕ್ಯಾನ್ಸರ್ ಎನ್ನುವವರೂ ಇದ್ದಾರೆ. ಆಪರೇಶನ್ ಆಗಿರುವುದಂತೂ ಖಚಿತ. ಎಲ್ಲಿ ಎನ್ನುವುದು ಗೊತ್ತಿಲ್ಲ. ರಾಹುಲ್ ಮತ್ತು ಪ್ರಿಯಾಂಕಾ ಇಬ್ಬರು ಕಳೆದ ವಾರ ಲೋಕಸಭೆಯಲ್ಲಿ ಕಾಣಿಸಿಕೊಂಡಿರುವುದರಿಂದ ಸೋನಿಯಾ ಆಪರೇಶನ್ ಮುಗಿಸಿ ಗೆಲುವಾಗಿದ್ದಾರೆ ಎನ್ನುವ ಸೂಚನೆ ಸಿಕ್ಕಿದೆ. ಈ ಮಧ್ಯೆ, ಫೋರ್ಬ್ಸ್ ಮ್ಯಾಗಸಿನ್ ಪ್ರಕಟಿಸಿದ 'ಜಗತ್ತಿನ ನೂರು ಮಂದಿ ಪ್ರಭಾವಶಾಲಿ ಮಹಿಳೆಯರ ಪಟ್ಟಿ'ಯಲ್ಲಿ ಸೋನಿಯಾ ಗಾಂಧಿ ಏಳನೇ ಸ್ಥಾನ ಪಡೆದಿದ್ದಾರೆ. ಅವರ ನೇತೃತ್ವದ ಯುಪಿಎ ಸರಕಾರ ಆರ್ಥಿಕ ಕ್ಷೇತ್ರದಲ್ಲಿ ನಡೆಸಿದ ಸಾಧನೆಗೆ ಈ ರ್‍ಯಾಂಕ್ ಸಂದಿದೆಯಂತೆ. ಆದರೆ ಭ್ರಷ್ಟಾಚಾರ ತಡೆಯುವಲ್ಲಿ ಸರಕಾರ ಯಶಸ್ವಿಯಾಗಿದ್ದರೆ ಸೋನಿಯಾ ರ್‍ಯಾಂಕಿಂಗ್ ಇನ್ನೂ ಏರುತ್ತಿತ್ತು. ಒಂದಂತೂ ನಿಜ– ಸೋನಿಯಾ ಇದ್ದಿದ್ದರೆ ಅಣ್ಣಾ ಹಜಾರೆಯವರ ಹೋರಾಟದ ವಿಷಯದಲ್ಲಿ ಸರಕಾರ ಇಷ್ಟೊಂದು ಗೊಂದಲಕ್ಕೆ ಈಡಾಗುತ್ತಿರಲಿಲ್ಲ.



## ಜಾಬ್ಸ್ ವಿದಾಯ

ಜಾಗತಿಕ ಸಾಫ್ಟ್‌ವೇರ್ ಉದ್ಯಮದ ಮುಂಚೂಣಿಯಲ್ಲಿರುವ ಆ್ಯಪಲ್ ಕಂಪೆನಿಯ ಸಿಇಓ ಹುದ್ದೆಯಿಂದ ಸ್ಟೀವ್ ಜಾಬ್ಸ್ (56) ನಿವೃತ್ತರಾಗಿದ್ದಾರೆ. ಅವರಿಂದ ಟಿಮ್ ಕುಕ್ ಅಧಿಕಾರ ವಹಿಸಿಕೊಂಡಿದ್ದಾರೆ. ಕೆಲವು ವರ್ಷಗಳಿಂದ ಖಾಲಿ ಇದ್ದ ಚೇರ್‌ಮನ್ ಹುದ್ದೆಯನ್ನು ಈಗ ಅಲಂಕರಿಸಿರುವ ಜಾಬ್ಸ್, ಕಂಪೆನಿಯಲ್ಲಿ ಕ್ರಿಯಾತ್ಮಕವಾಗಿ ಇನ್ನೂ ತೊಡಗಿರಬೇಕು ಎನ್ನುವುದು ಆಡಳಿತ ಮಂಡಲಿಯ ನಿರೀಕ್ಷೆ. ಆದರೆ ಅನಾರೋಗ್ಯ ಇದಕ್ಕೆ ಅವಕಾಶ ನೀಡುತ್ತಿಲ್ಲ.

ದೈತ್ಯ ಪ್ರತಿಸ್ಪರ್ಧಿ ಮೈಕ್ರೊಸಾಫ್ಟ್ ಹೊಡೆತದಿಂದ ಆ್ಯಪಲ್ ಕಂಪೆನಿಯನ್ನು ಮೇಲೆತ್ತುವಲ್ಲಿ ಜಾಬ್ಸ್ ವಹಿಸಿದ ಪಾತ್ರ ಅತ್ಯಂತ ಮಹತ್ವದ್ದು. 80 ಶತಕೋಟಿ ಡಾಲರ್ ಕಂಪೆನಿಯನ್ನು ಈಗಿನ 350 ಶತಕೋಟಿ ಡಾಲರ್ ಕಂಪೆನಿಯಾಗಿ ಪರಿವರ್ತಿಸಿದ್ದು ಜಾಬ್ಸ್



ಸಾಮರ್ಥ್ಯಕ್ಕೆ ಸಾಕ್ಷಿ. 1976ರಲ್ಲಿ ಗೆಳೆಯನೊಬ್ಬನ ಜತೆ ಸೇರಿ ಕಂಪೆನಿಯನ್ನು ಹುಟ್ಟುಹಾಕಿದ ಜಾಬ್ಸ್ ಆ ಬಳಿಕ 85ರಲ್ಲಿ ಕಂಪೆನಿಯಿಂದಲೇ ನಿರ್ಗಮಿಸಬೇಕಾಯಿತು. ಆದರೆ 1997ರಲ್ಲಿ ಮತ್ತೆ ಕಂಪೆನಿಗೆ ಮರಳಿದ ಅವರು ದಿವಾಳಿಯ ಅಂಚಿನಿಂದ ಕಂಪೆನಿಯನ್ನು ರಕ್ಷಿಸಿದ್ದರು. ಹೊಸ ತಂಡವೊಂದನ್ನು ಕಟ್ಟಿ ಆ್ಯಪಲ್‌ಅನ್ನು ಮುಂಚೂಣಿಗೆ ತಂದು ನಿಲ್ಲಿಸಿದ್ದರು.

ಆ್ಯಪಲ್ 1, ಮೆಕಿಂತೋಶ್, ಐಮ್ಯಾಕ್, ಐಪೋಡ್, ಐಫೋನ್ ಮುಂತಾಗಿ 1976ರಿಂದ 2010ರವರೆಗೆ ನಿರಂತರ ಹೊಸ ಉತ್ಪನ್ನಗಳನ್ನು ಮಾರುಕಟ್ಟೆಗೆ ತಂದು ಕಂಪೆನಿಯ ತಾರಾಮೌಲ್ಯ ಹೆಚ್ಚಿಸಿದವರು ಜಾಬ್ಸ್. ಅವರು ಹೊರತಂದ ಆ್ಯಪಲ್ 3, ಲಿಸಾ, ಪಕ್ ಮೌಸ್, ದಿ ಕ್ಯೂಬ್, ಆ್ಯಪಲ್ ಟಿವಿ ಮುಂತಾದ ಉತ್ಪನ್ನಗಳು ದೀರ್ಘಾವಧಿಯಲ್ಲಿ ಫ್ಲಾಪ್ ಆದರೂ ಮಾರುಕಟ್ಟೆಗೆ ಬಂದಾಗ ಹೊಸ ಸಂಚಲನ ಉಂಟು ಮಾಡಿದ್ದು ಸುಳ್ಳಲ್ಲ. ಕಳೆದ 7 ವರ್ಷಗಳಿಂದ ಕ್ಯಾನ್ಸರ್ ಜತೆಗೆ ಹೋರಾಡುತ್ತಲೇ ಕಂಪೆನಿಯ ಅಭಿವೃದ್ಧಿಗೆ ದುಡಿದ ಜಾಬ್ಸ್, 'ಕೊನೇ ಉಸಿರು ಇರುವವರೆಗೂ ಕಂಪೆನಿಗೆ ಬರುತ್ತಲೇ ಇರುತ್ತೇನೆ' ಎಂದಿದ್ದಾರೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65